ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮತ್ತು ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 79(2) ರನ್ವಯ ಕುಮ್ಕಿ, ಕಾನೆ, ಬಾಣೆ ಮೊದಲಾದ ವಿಶೇಷ ಸವಲತ್ತುಗಳನ್ನು ಮುಂದುವರೆಸಿಕೊಂಡು ಬರಲಾಗಿದೆ. ಈ ಕಾಯ್ದೆ ಅನ್ವಯ ಇಂತಹ ಜಮೀನುಗಳನ್ನು ಮಂಜೂರು ಮಾಡಲು ಅವಕಾಶ ಇರುವುದಿಲ್ಲ. ಅಲ್ಲದೆ, ಮಾನ್ಯ ಉಚ್ಚ ನ್ಯಾಯಾಲಯದ ಡಿವಿಷನ್ ಬೆಂಚ್, ಕಾನೆ, ಬಾಣೆ, ಬೆಟ್ಟ, ಸೊಪ್ಪಿನಬೆಟ್ಟ, ಜುಮ್ಮಾ ಬಾಣೆ, ಜುಮ್ಮ ಮಲೈ ಜಮೀನುಗಳು ಅರಣ್ಯ ಭೂಮಿಗಳೆಂದು ತೀರ್ಪು ನೀಡಿದೆ. ಆದ್ದರಿಂದ ಇಂತಹ ಜಮೀನುಗಳನ್ನು ಪರಭಾರೆ ಮಾಡಲು ಅಥವಾ Proprietry rights ಅನ್ನು ಹೊಂದಲು ಅವಕಾಶವಿಲ್ಲ ಎಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಿದೆ. ಅಲ್ಲದೆ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಬಿ(1) ರಡಿಯಲ್ಲಿನ ಎರಡನೇ ಪ್ರಾವಿಸೋ ಪ್ರಕಾರ Forest Conservation Act, 1980 ಅಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಕಲಂ 94ಬಿ ಅಡಿಯಲ್ಲಿ ಇಂತಹ ಜಮೀನುಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

463 ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತ್ರದಲ್ಲಿರುವ ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಯೋಜನೆಯ ರೂಪುರೇಷೆ ಏನು;

ಇ) ಕಾಮಗಾರಿಯ ಅಂದಾಜು ವೆಚ್ಚ ಹಾಗೂ ಮಂಜೂರಾತಿ ನೀಡಿದ ಅನುದಾನದ ವಿವರಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಸರ್ವೆ ಕಾರ್ಯ ಪೂರ್ಣವಾದ ನಂತರ ವಿವರಗಳು ಲಭ್ಯವಾಗುವುದು.

ಇ) ಸರ್ವೆ ಕಾರ್ಯ ಪೂರ್ಣವಾದ ನಂತರ ವಿವರಗಳು ಲಭ್ಯವಾಗುವುದು.

571 ಶ್ರೀ ರುದ್ರೇಶ್‌ಗೌಡ.ವೈ.ಎನ್. : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಯಗಚಿ ಯೋಜನೆ ಜಾರಿಗೆ ತರಲಾಗಿದೆಯೆ?

ಆ) ಹಾಗಿದ್ದಲ್ಲಿ, ಯಗಚಿ ಯೋಜನೆಯ ಎಡದಂಡೆ ನಾಲೆಯು ಬೇಲೂರು ತಾಲ್ಲೂಕಿನ ಹೀರಗುಪ್ಪೆ ಗ್ರಾಮದ ಪಕ್ಕದಲ್ಲಿ ಹಾದು ಹೋಗಿರುವುದರಿಂದ, ನಾಲೆಯಲ್ಲಿ ನೀರು ಹರಿಯುವಾಗ ಹೀರಗುಪ್ಪೆ ಗ್ರಾಮದ ಮನೆಗಳು, ದೇವಸ್ಥಾನ ಹಾಗೂ ಇತರೆ ಕಟ್ಟಡಗಳು ಶೀತಪೀಡಿವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಗ್ರಾಮವನ್ನು ಸ್ಥಳಾಂತರಿಸಿ, ಪುನರ್ ವಸತಿಯನ್ನು ಕಲ್ಪಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಬೇಲೂರು ತಾಲ್ಲೂಕಿನಲ್ಲಿ ಯಗಚಿ ಯೋಜನೆ ನಿರ್ಮಾಣಕ್ಕೆ ಸರ್ಕಾರದ ಆದೇಶ ಸಂಖ್ಯೆ: PWD 91 NHP 83, ದಿನಾಂಕ: 27-06-1984, ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಯೋಜನೆಯನ್ನು ಜಾರಿಗೆ ತರಲಾಗಿದೆ.

ಆ) ಹೀರಗುಪ್ಪೆ ಗ್ರಾಮವು ಯಗಚಿ ಎಡದಂಡೆ ನಾಲೆಯ 22ನೇ ಕಿ.ಮೀ ನಿಂದ ಸುಮಾರು 300 ಮೀ. ದೂರದಲ್ಲಿದ್ದು, ನಾಲಾ ತಳಮಟ್ಟದ ಆರ್.ಎಲ್ 947.400 ಮೀ. ಇದ್ದು, ಹೀರಗುಪ್ಪೆ ಗ್ರಾಮವು ಸರಸರಿ 950.560 ಮೀ. ಎತ್ತರದಲ್ಲಿರುತ್ತದೆ. ಶೀತಪೀಡಿತವಾಗುವುದನ್ನು ತಾತ್ಕಾಲಿಕವಾಗಿ ತಡೆಗಟ್ಟಲು ಈಗಾಗಲೇ ಊರಿನ ಸುತ್ತ ಸಿಪೇಜ್ ಡ್ರೈನ್ ಮಾಡಲಾಗಿದೆ.

ಇ) ಹೇಮಾವತಿ ಮತ್ತು ಯಗಚಿ ಯೋಜನೆಗಳ ಅಡಿಯಲ್ಲಿ ಶೀತಪೀಡಿತವಾಗಿರುವ ಗ್ರಾಮಗಳನ್ನು ಗುರುತಿಸಿ ಸ್ಥಳಾಂತರಿಸಲು ಶಿಫಾರಸ್ಸು ಮಾಡಲು ಸರ್ಕಾರದ ಆದೇಶ ಸಂಖ್ಯೆ:ಕಂಇ 215 ಆರ್‌ಇಹೆಚ್ 2008, ದಿನಾಂಕ: 11-12-2008, ರಂತೆ ಪ್ರಾದೇಶಿಕ ಆಯುಕ್ತರು, ಮೈಸೂರು, ಇವರ